೫)	ಜಿಲ್ಲೆ	೧೯೮೬–೮೭	೧೯೮೭–೮೮	೧೯೮೮–೮೯
		(ಕೆ. ಜಿ. ಯಲ್ಲಿ)	(ಕೆ. ಜಿ. ಯಲ್ಲಿ)	(ಕೆ. ಜಿ. ಯಲ್ಲಿ)
೧)	ಕೊಡಗು	೬,೮೫೦	೨೯,೧೪೦	೧,೧೮,೧೮೮
೨)	ದಕ್ಷಿಣ ಕನ್ನಡ	—	೨೮,೫೮೫	೨೯,೭೮೦
೩)	ಹಾಸನ	೧೦,೬೨೫	೯,೦೦೦	೨೯,೮೨೫
೪)	ಶಿವಮೊಗ್ಗ	೨೪,೩೩೫	೪,೨೫೦	೩೭೫
೫)	ಬೆಂಗಳೂರು	—	೬,೮೨೫	—
	(ನಗರ)	—	—	—
೬)	ಉತ್ತರ ಕನ್ನಡ	—	೫,೨೫೦	೫೭೫
	ಒಟ್ಟು	೪೧,೮೧೦	೮೩,೦೫೦	೧,೭೮,೭೪೩

ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿಕೆ

(೧) ಸಿಂಧಗಿ ಪೋಲೀಸ್ ಠಾಣೆಯಲ್ಲಿ ಪತ್ರಕರ್ತರೊಬ್ಬರನ್ನು ಅಕ್ರಮವಾಗಿ ಬಂಧನದಲ್ಲಿಟ್ಟಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಇವತ್ತು ನಿಲುವಳಿ ಸೂಚನೆ ಮೂಲಕ ಒಂದು ಪ್ರಾಮುಖ್ಯವಾದ ವಿಷಯ ತಂದಿದ್ದೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡ್ರಿ. ಇವತ್ತು ೫ ನಿಲುವಳಿ ಸೂಚನೆ ಬಂದಿವೆ. ಒಂದು, ಶ್ರೀ ಯು. ಭೂಪತಿ, ಶ್ರೀ ಬಿ. ಗುರುಪ್ರಸಾದ್, ಶ್ರೀ ಎನ್. ಎಸ್. ಖೇಡ್, ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಆರ್. ವೆಂಕಟರಾಮಯ್ಯ, ಶ್ರೀ ಬಿ. ಬಸವಲಿಂಗಪ್ಪ, ಶ್ರೀ ಬಿ. ಎಸ್. ಯಡಿಯೂರಪ್ಪ, ಶ್ರೀ ಎಂ. ಎಸ್. ನಾರಾಯಣರಾವ್, ಶ್ರೀ ಕೆ. ಹೆಚ್. ಶ್ರೀನಿವಾಸ್ ಇವರು ಏನು ಹೇಳಿದ್ದಾರೆಂದರೆ, 'illegal detention of journalist Sri Chandrashekara Thanduru Editor of Varada Rajakeeya by the Police Sub–Inspector, Sindhagi police Station'. ಎರಡನೆಯದು, ಆರ್. ವೆಂಕಟರಾಮಯ್ಯನವರು ಯಾವುದರ ಬಗ್ಗೆ ಕೊಟ್ಟಿದ್ದಾರೆ ಎಂದರೆ, 'Regarding the close–down of 13 textile mills and nearly 13,500 workers of the textile mills in Karnataka are thrown out of job.

(ಗೊಂದಲ)

ಮೂರನೆಯದು, ಶ್ರೀಮಾನ್ ಖಿರ್ಗೆಯವರು, ಕಾಂಗ್ರೆಸ್ ಪಕ್ಷ ಹಾಗೂ ರಾಷ್ಟ್ರೀಯ ನಾಯಕತ್ವವನ್ನು ಕೊಲೆಗಡುಕರ ಪಕ್ಷ ಎಂದು ಮುಖ್ಯಮಂತ್ರಿಗಳು ಹೇಳಿಕೆ ನೀಡಿರುವ ಬಗ್ಗೆ, ನಾಲ್ಕನೆಯದು, ಯಡಿಯೂರಪ್ಪನವರು ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ ಉದ್ರಿಕ್ತ ಗ್ರಾಮಸ್ಥರ ಮೇಲೆ ನಡೆದಿರುವ ಗೋಲಿಬಾರ್ ಬಗ್ಗೆ, ಐದನೆಯದು ಶ್ರೀ ಎಂ. ಎಸ್. ಕೃಷ್ಣನ್, ಅವರು ಕಾಗದ ಬರೆದು, ನಿಲುವಳಿ ಸೂಚನೆ ಆಗದಿದ್ದರೆ ನಿಯಮ ೬೮ರ ಪ್ರಕಾರವಾದರೂ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದಿದ್ದಾರೆ. ಈಗ ಮೊನ್ನೆ ಬಿ.ಎ.ಸಿ. ಯಲ್ಲಿ ಆಗಿರುವ ತೀರ್ಮಾನದ ಪ್ರಕಾರ ಇವತ್ತಿನ ದಿವಸ ವೋಟ್ ಇನ್ ಅಕೌಂಟ್ ತೆಗೆದುಕೊಂಡು ಬಿಡುವುದು. ನಾಳೆಯಿಂದ ಮುಂದಿನ ೪ ದಿನಗಳಲ್ಲಿ ಇವುಗಳ

ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಈ ಹಂತದಲ್ಲಿ ನಾನು ಈ ಐದನ್ನೂ ಕನ್‌ವರ್ಟ್ ಮಾಡುವುದಕ್ಕಾಗಲಿ, ರಿಜೆಕ್ಟ್ ಮಾಡುವುದಕ್ಕಾಗಲಿ ಹೋಗುವುದಿಲ್ಲ. ನಾಳೆ ನಿಮ್ಮನ್ನು ಮತ್ತು ಸಭಾ ನಾಯಕರನ್ನು ಕರೆಸಿ ಚರ್ಚೆ ಮಾಡಿ ಇದನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗುತ್ತದೋ ಆ ರೀತಿ ಮಾಡೋಣ. ಆಮೇಲೆ in page 422, of practices and procedures of Parliament it is said as follows:

> "It has been held that an adjournment motion on a matter which can be raised during debate on the motion of thanks on the President's Address, budget discussion, motion on international situation, motion regarding a matter of public importance such as food policy etc., to be held in the same session is not in order. Similarly, a matter which can be raised under any other procedural device *viz.*, calling attention notices, questions, short notice questions, half-an-hour discussions, short duration discussions etc., cannnot be raised through an adjournment motion."

ಆದರೂ ಕೂಡ ನಾನು ಯಾವುದನ್ನೂ ರಿಜೆಕ್ಟ್ ಮಾಡುವುದಿಲ್ಲ. ಆದ್ದರಿಂದ ಈಗ ಬಜೆಟ್ ಮೇಲಿನ ಚರ್ಚೆ ಮಧ್ಯಾಹ್ನ ಎರಡು ಗಂಟೆಯೊಳಗೆ ಮುಗಿಯಬೇಕು. ಆಮೇಲೆ ಮುಖ್ಯಮಂತ್ರಿಗಳ ಉತ್ತರ.

ಶ್ರೀ ಆರ್ ವೆಂಕಟರಾಮಯ್ಯ.—ಚಂದ್ರಶೇಖರ ತಂದೂರರ ಬಗ್ಗೆ ಬಹಳ ಪ್ರಾಮುಖ್ಯ ವಿಷಯ ಇದೆ.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಖರ್ಗೆಯವರಾಗಲಿ, ಶ್ರೀನಿವಾಸ್‌ರವರಾಗಲಿ ಚರ್ಚೆ ಶುರು ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಏನಾಗಿದೆ ಅಧ್ಯಕ್ಷರೇ, ನಮ್ಮದು ರಾಷ್ಟ್ರೀಯ ಪಕ್ಷ. ಇಂದಿರಾಗಾಂಧಿಯವರ ಕೊಲೆಗಡುಕರು ನಾವೆಂದು ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಕೊಟ್ಟರೆ ಇಡೀ ದೇಶದಲ್ಲಿ ಅದರ ಪರಿಣಾಮವೇನಾಗುತ್ತದೆ.

ಗೊಂದಲ

ಅಧ್ಯಕ್ಷರು.—ಇವ್ಯಾವುದನ್ನು ಎತ್ತಲು ನಾನು ಅವಕಾಶ ಕೊಡಲಾರೆ. ದಯವಿಟ್ಟು ಕುಳಿತುಕೊಳ್ಳಿ. ನಾನು ನಿಮ್ಮೆಲ್ಲರ ಪ್ರತಿನಿಧಿಯಾದ್ದರಿಂದ ನಾಳೆಯಿಂದ ಆ ವಿಷಯವನ್ನು ತೆಗೆದುಕೊಳ್ಳಲಾಗುವುದೆಂದು ನಾನೇ ಅವರಿಗೆ ಹೇಳಿಬಿಟ್ಟಿದ್ದೇನೆ. ಇವತ್ತು ಬಜೆಟ್ ಭಾಷಣದ ಮೇಲೆ ಮಾತನಾಡುವಾಗ ಇವುಗಳ ಬಗ್ಗೆಯೂ ಬೇಕಾದರೆ ಸೇರಿಸಿ ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದೇ ಪಕ್ಷವಾಗಲಿ, ಅದನ್ನು ಇಂದಿರಾಗಾಂಧಿಯವರ ಕೊಲೆಯಲ್ಲಿ ಇನ್‌ವಾಲ್ವ್ ಆಗಿದ್ದ ಪಕ್ಷ ಎಂದರೆ ಪರಿಣಾಮ ಏನಾಗುತ್ತದೋ ಹೇಳಿ ? ಆದ್ದರಿಂದ ಈ ಬಗ್ಗೆ ನಾಳೆ ಆಗುವುದಿಲ್ಲ, ಇವತ್ತೇ ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಇಲ್ಲ, ನಾಳೆ ತೆಗೆದುಕೊಳ್ಳೋಣ.

೧೧-೩೦ ಎ. ಎಂ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಕೊಟ್ಟಿರತಕ್ಕಂತಹ ವಿಷಯವನ್ನು ತಾವು ಇವತ್ತು ತೆಗೆದುಕೊಳ್ಳಬೇಕು.

(ಗೊಂದಲ)

MR. SPEAKAR.—Nothing will go on record. ತಾವುಗಳು ಕಳುಹಿಸಿರುವ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಓದಿ ಹೇಳಿದ್ದೇನೆ. ಈಗ ಬಡ್ಜೆಟ್ ಮೇಲೆ ಮಾತನಾಡಿ. ಬಿಜಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ನಾವು ಸಭೆ ನಡೆಸಬೇಕಾಗುತ್ತದೆ. ಮಾನ್ಯ ಖರ್ಗೆಯವರು, ಕೃಷ್ಣನ್‌ರವರು, ನಾರಾಯಣರಾವ್‌ರವರು ಎಲ್ಲರೂ ಕೂಡಿ ಈ ತೀರ್ಮಾನವನ್ನು ಮಾಡಿದ್ದೀವಿ ಆದರ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ, ಇಬ್ಬರನ್ನೂ ಕೇಳಿ ಇವತ್ತು ಕಾಲಿಂಗ್ ಅಟೆನ್‌ಷನ್ ಮತ್ತು ನಿಯಮ ೩೩೪ ಅನ್ನು ಇಟ್ಟಿಲ್ಲ. ಈಗ ಮಾನ್ಯ ಖರ್ಗೆಯವರಾಗಲೀ ಇಲ್ಲವೇ ಶ್ರೀನಿವಾಸ್‌ರವರಾಗಲೀ ಬಡ್ಜೆಟ್ ಮೇಲೆ ಭಾಷಣ ಮಾಡಿ, ಆಮೇಲೆ ಬೇಕಾದರೆ ಇದರ ಬಗ್ಗೆ ಕೂಡ ಸ್ವಲ್ಪ ಪ್ರಸ್ತಾಪವನ್ನು ಮಾಡಬಹುದು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಲಕ್ಷಾಂತರ ಜನ ರೈತರು ಸಾಯುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಈಗ ನೀವು ಏನು ಹೇಳಿದರೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಾಗಿಲ್ಲ)

ಅಧ್ಯಕ್ಷರು.—ವಿರೋಧಪಕ್ಷದ ಉಪನಾಯಕರಾಗಲೀ, ಶ್ರೀನಿವಾಸ್‌ರವರಾಗಲೀ ಇಬ್ಬರ ಪೈಕಿ ಒಬ್ಬರುಂ ಬಡ್ಜೆಟ್ ಮೇಲೆ ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜವಾಬ್ದಾರಿ ಇರತಕ್ಕಂತಹ ಒಬ್ಬ ಮುಖ್ಯ ಮಂತ್ರಿ ಈ ರೀತಿ ಹೇಳುವುದು ಸರಿಯಲ್ಲ. ಈ ರೀತಿ ಮಾತನಾಡುವುದು ಸರಿಯಲ್ಲ. ಎಲ್ಲರನ್ನೂ ಹೊರಕ್ಕೆ ಹಾಕಿ ಈ ರೀತಿ ಹೇಳತಕ್ಕಂಥಾದ್ದು ಒಳ್ಳೆಯದೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ರಿಜೆಕ್ಟ್ ಮಾಡಲಿಲ್ಲ. ಬಡ್ಜೆಟ್ ಮೇಲೆ ಭಾಷಣ ಮಾಡುವಾಗ ಇದರ ಬಗ್ಗೆ ಕೂಡ ಸ್ವಲ್ಪ ಹೇಳಿ..

(ಗೊಂದಲ)

ಅಧ್ಯಕ್ಷರು.—ದಿವಸಕ್ಕೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಮಾನ್ಯ ಭೂಪತಿಯವರು, ಮಾನ್ಯ ವೆಂಕಟರಾಮಯ್ಯನವರು, ಖರ್ಗೆಯವರ ಹಾಗೂ ಯಡಿಯೂರಪ್ಪನವರು ಎರಡನ್ನು ಕಳಿಸಿದ್ದಾರೆ. ಇವುಗಳ ವಿಷಯ ಏನು ಎಂದು ಹೇಳಿದ್ದೇನೆ. ನಿಮ್ಮನ್ನೂ ಮತ್ತು ಅವರನ್ನೂ ನನ್ನ ಚೇಂಬರಿನಲ್ಲಿ ಕರೆಯಿಸಿ ಚರ್ಚೆ ಮಾಡಿ ನಾಳೆ ಇದನ್ನು ಯಾವ ರೂಪದಲ್ಲಿ, ಯಾವ ನಿಯಮದ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂಬುದನ್ನು ವಿಚಾರ ಮಾಡೋಣ. ಈಗ ಇಬರಿಬ್ಬರ ಪೈಕಿ ಒಬ್ಬರು ಬಡ್ಜೆಟ್ ಮೇಲೆ ಮಾತನಾಡಲಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಸಹಕಾರಿ ಸಂಘ....

(ಗೊಂದಲ)

MR. SPEAKAR.—Nothing will go on record.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಯಾವಾಗ ಪೋಟ್ ಅನ್ ಅಕೌಂಟ್ ತೆಗೆದುಕೊಳ್ಳುತ್ತಾರೆ, ಆಗ ಮನೆಗೆ ಹೋಗುತ್ತಾರೆ ಇದು ನಮ್ಮ ಅನುಭವದ ಮಾತು. ಆದ್ದರಿಂದ ಈಗಲೇ ತೆಗೆದುಕೊಳ್ಳಿ.

ಅಧ್ಯಕ್ಷರು.—ಚೇಂಬರಿನಲ್ಲಿ ಚರ್ಚೆ ಮಾಡಿ ಯಾವ ರೂಪದಲ್ಲಿ ಇದನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನಿರ್ಣಯ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಧಾನ ಮಂತ್ರಿಗಳ ಬಗ್ಗೆ ಕಾಂಗ್ರೆಸ್ ಪಕ್ಷದ ಬಗ್ಗೆ ಅವರು ಈ ರೀತಿ ಹೇಳಿದ್ದಾರೆ. The Chief Minister should withdraw his remarks.

(ಗೊಂದಲ)

ಅಧ್ಯಕ್ಷರು,—ಬಜೆಟ್ ಮೇಲಿನ ಭಾಷಣದಲ್ಲಿ ಹೇಳುವುದಾದರೆ ಅಡ್ಡಿ ಇಲ್ಲ. ಆಗ ಹೇಳಿ.

(ಗೊಂದಲ)

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪತ್ರಿಕೆಯಲ್ಲಿ ಬಂದಿದೆ.

(ಗೊಂದಲ)

ಅಧ್ಯಕ್ಷರು.—ಪತ್ರಿಕೆಯನ್ನು ನಾನೂ ಕೂಡ ಓದಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನೇರವಾಗಿ ಅವರು ಚಾರ್ಜ್ ಮಾಡಿದ್ದಾರೆ. ಅದನ್ನು ಪ್ರೂವ್ ಮಾಡಬೇಕಾಗುತ್ತದೆ. ಬೇಜವ್ದಾರಿಯುತವಾಗಿ ಈ ರೀತಿ ಹೇಳತಕ್ಕಂಥಾದ್ದು ಸರಿಯಲ್ಲ. ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಅವರು ಪ್ರೂವ್ ಮಾಡಬೇಕು.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್–ಐ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡಲಾರಂಭಿಸಿದ್ದರು ಗೊಂದಲಮಯ ವಾತಾವರಣ)

ಅಧ್ಯಕ್ಷರು.—ನೀವು ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇವತ್ತು.....

(ಗೊಂದಲ)

ಅಧ್ಯಕ್ಷರು.—ಖರ್ಗೆಯವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಚರ್ಚೆಗೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಹೇಳಲಿಲ್ಲ. ಯಾವ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂಬುದನ್ನು ನೋಡುತ್ತೇನೆ ಎಂದು ಹೇಳಿದ್ದೇನೆ. ನಿಮಗೆ ನಾಳೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ತಾವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ಅನೇಕ ಮಹತ್ವವಾದ ವಿಷಯಗಳನ್ನು ಎತ್ತಿದಾಗ ಅದಕ್ಕೆ ಉತ್ತರವನ್ನು ಕೊಡಿಸುತ್ತೀರಿ, ಆ ರೀತಿ ಉತ್ತರ ಕೊಡಿಸಿದ ಮೇಲೆ ನಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೂ ಕೂಡಾ ಅವಕಾಶ ಇಲ್ಲ. ಅವರುಗಳು ತಮಗೆ ಅಷ್ಟೊಂದು ಒತ್ತಾಯವನ್ನು ತರುತ್ತಾರೆ.

ಅಧ್ಯಕ್ಷರು.—ಅವರು ಒತ್ತಾಯ ತಂದರು ಎಂದರೆ ನಾನು ಕೇಳುವುದಿಲ್ಲ, ನೀವುಗಳು ಒತ್ತಾಯ ತಂದರೂ ಕೂಡಾ ನಾನೂ ಕೇಳುವುದಿಲ್ಲ. ಈ ಜಾಗದಲ್ಲಿ ಬೇಕು ಎಂದರೆ ಇರುತ್ತೆನೆ, ಇಲ್ಲ ಎಂದರೆ

ಬಿಟ್ಟು ಹೋಗುತ್ತೇನೆ. ನಾನು ನ್ಯಾಯ ನಿಷ್ಠುರ, ದಯಾದಾಕ್ಷಿಣ್ಯ ಪರ ಅಲ್ಲ ಎಂದು ಹೇಳುತ್ತೇನೆ. ಯೋಗ್ಯತೆ ಇದ್ದರೆ ಯಾರು ಹೇಳಿದರೂ ಕೇಳುತ್ತೇನೆ. ಒಬ್ಬ ಸಾಮಾನ್ಯ ಪ್ರಜೆ ಹೇಳಿದರೂ ಕೇಳುತ್ತೇನೆ ಯೋಗ್ಯತೆ ಇದ್ದರೆ ಮಾತ್ರ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ಸಾಮಾನ್ಯ ಪ್ರಜೆಗಳು ಬರುವುದಿಲ್ಲ. ಪ್ರಜೆಗಳು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ, ಅವರ ಪರವಾಗಿ ನಾವು ಇಲ್ಲಿ ಮಾತನಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:—ಖರ್ಗೆಯವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರ ಮೇಲೋ ಗೊಬೆ ಕೂರಿಸಿ ಬಾಯಿಗೆ ಬಂದ ಹಾಗೆ ಮಾತನಾಡುವುದು ಸರಿಯಲ್ಲ. ಈ ಸಭೆಯು ಈ ರಾಜ್ಯದ ಜನತೆಯ ಬಗ್ಗೆ ಚಿಂತನೆಯನ್ನು ಮಾಡುವುದಕ್ಕೆ ಇರುವುದು.

(ಗೊಂದಲ)

ಅಧ್ಯಕ್ಷರು.—ಖರ್ಗೆಯವರೇ, ತಾವು ಬಜೆಟ್ ಮೇಲೆ ತಮ್ಮ ಭಾಷಣವನ್ನು ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರುಗಳು ಹಣವನ್ನು ಕಟ್ಟುವುದಕ್ಕೆ ೨೫ನೇ ತಾರೀಖೇ ಕೊನೆಯ ದಿನವಾಗಿದೆ. ಇವತ್ತು ಇಪ್ಪತ್ತೈರಡು ಸಾವಿರ ಜನ ರೈತರುಗಳು ಹಣವನ್ನು ಕಟ್ಟುವುದಕ್ಕೆ ಬಂದಿದ್ದಾರೆ. ಆದರೆ ಸೊಸೈಟಿಯವರು ಬೀಗವನ್ನು ಹಾಕಿವೆ. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಿಲ್ಲವಲ್ಲ ಸ್ವಾಮಿ, ಈ ರೀತಿಯಾದರೆ ರೈತರುಗಳ ಗತಿಯೇನು ?

(ಗೊಂದಲ)

ಶ್ರೀ ಆರ್. ವೆಂಕಟರಾವಪ್ಪ.—ರೈತರುಗಳ ಬಗ್ಗೆ ಸರ್ಕಾರದವರು ಗಮನಹರಿಸಬೇಕಾಗುತ್ತದೆ. ಇಲ್ಲದಿದ್ದರೆ ಆ ರೈತರುಗಳು ಪೀನಲ್ ಇಂಟರೆಸ್ಟ್‌ನ್ನು ಕಟ್ಟಿಬೇಕಾಗುತ್ತದೆ. ಇವತ್ತು ಸೊಸೈಟಿಗಳು ಬೀಗ ಹಾಕಿವೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಂಥ ಪ್ರಾಮುಖ್ಯವಾದ ವಿಷಯದ ಬಗ್ಗೆ ಸರ್ಕಾರ ಗಮನವನ್ನು ಕೊಡಲಿಲ್ಲ ಎಂದು ಹೇಳಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಈ ರೀತಿ ಎಲ್ಲರೂ ಎದ್ದುನಿಂತು ಮಾತನಾಡುವುದು ಸರಿಯಲ್ಲ. ಈಗಾಗಲೇ ನನ್ನ ತೀರ್ಮಾನವನ್ನು ಹೇಳಿದ್ದೇನೆ. ಖರ್ಗೆಯವರೇ ದಯವಿಟ್ಟು ಇಲ್ಲಿ ಕೇಳಿ. ಭೂಪತಿಯವರ್ ಮತ್ತು ಇತರ ಸದಸ್ಯರು ಕೂಡಾ ನೋಟೀಸನ್ನು ಕೊಟ್ಟಿದ್ದಾರೆ. ಆದರಲ್ಲಿ ಮೊದಲನೆಯವರು ಶ್ರೀಮಾನ್ ಭೂಪತಿಯವರು. ಎರಡನೆಯವರು ವೆಂಕಟರಾಮಯ್ಯನವರು, ಮೂರನೆಯವರು ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಒಂದು ದಿವಸಕ್ಕೆ ಒಂದೊಂದೇ ಅಡ್ಜರ್ನ್‌ಮೆಂಟ್ ಮೋಷನನ್ನು ತೆಗೆದುಕೊಳ್ಳಬೇಕು ಎಂದು ನಿಯಮ ಇದೆ. ಇವತ್ತು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತೆಗೆದುಕೊಂಡರೂ ಕೂಡಾ ಖರ್ಗೆಯವರದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಏತಕ್ಕೆಂದರೆ ಇಲ್ಲಿ ಮೊದಲನೆಯದು ಶ್ರೀ ಭೂಪತಿಯವರದು ಇದೆ. ನಿಮ್ಮದು ಮೂರನೇ ನಂಬರ್‌ನಲ್ಲಿದೆ. ಇಲ್ಲಿ ಮೊದಲು ಭೂಪತಿಯವರ ನೋಟೀಸ್ ಬಂದಿದೆ. ಒಟ್ಟು ಐದು ನೋಟೀಸ್‌ಗಳು ಬಂದಿದೆ ಆ ಐದಕ್ಕೂ ಕೂಡಾ ನಾನು ಚರ್ಚೆಗೆ ಅವಕಾಶವನ್ನು ಮಾಡಿ ಕೊಡುತ್ತೇನೆ. ಇನ್ನು ನಾಲ್ಕು ದಿವಸ ಇದೆ. ನಿಮ್ಮ ಐದೂ ಮಂದಿಯನ್ನೂ ಕೇಳಿ ಆದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ. ಈಗ ಖರ್ಗೆಯವರು ಬಜೆಟ್ ಮೇಲೆ ಭಾಷಣವನ್ನು ಪ್ರಾರಂಭ ಮಾಡಲಿ. ಆದರಲ್ಲಿ ಬೇಕಾದರೆ ಮಾತನಾಡಲಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಇವತ್ತು ರೈತರುಗಳಿಗೆ ಅನ್ಯಾಯವಾಗಿದೆ. ಇದರ ಬಗ್ಗೆ ಸರ್ಕಾರದವರು ಗಮನವನ್ನು ಹರಿಸಲಿಲ್ಲ ಎಂದು ಹೇಳಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಬಜೆಟ್ ಮೇಲೆ ನೀವು ಮಾತನಾಡಿ. ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ರೈತರ ಪ್ರಶ್ನೆ ಇಂಪಾರ್ಟೆಂಟ್ ಅಲ್ಲ, ಸೊಸೈಟಿ ಪ್ರಶ್ನೆ ಇಂಪಾರ್ಟೆಂಟ್ ಅಲ್ಲ ಎಂದು ಹೇಳಲಿಲ್ಲ...

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಇದೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ಇಡೀ ಸದನದಲ್ಲಿ ೬೬ ಜನ ಕಾಂಗ್ರೆಸ್ ಸದಸ್ಯರು ಇದ್ದೇವೆ ಸದಸ್ಯರ ಮೇಲೆ ತೋರಿಸುವ ರೀತಿ ಬಗ್ಗೆ.....

(ಗೊಂದಲ)

ಅಧ್ಯಕ್ಷರು.—ನಿಮ್ಮದು ಇವೊತ್ತು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಭೂಪತಿಯವರದು ಮಾಡಲು ಇದೆ, ಅವರ ವಿಷಯ ಮೊದಲು ತೆಗೆದುಕೊಳ್ಳಬೇಕು.....

ಶ್ರೀ ವೇದಾಂತ ಹೆಮ್ಮಿಗೆ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಇವರದ್ದು ಯಾವ ಕ್ರಿಯಾಲೋಪ.. ...

ಶ್ರೀ ವೇದಾಂತ ಹೆಮ್ಮಿಗೆ.—ನೀವು ಮಾತನಾಡುವಾಗ ನಾವು ಬಹಳ ತಾಳ್ಮೆಯಿಂದ ಕೇಳುತ್ತೇವೆ. ನೀವು ಮಾತನಾಡುವಾಗ ಕ್ರಿಯಲೋಪ ಎತ್ತಿದ್ದೇನೆ. ನೀವು ಬಹಳ ಹಿರಿಯ ಸದಸ್ಯರು. ನಾನು ಮಾತನಾಡುವಾಗ ನಿಮ್ಮ ಪರ್ಮಿಷನ್ ಕೇಳಿಲ್ಲ, ನಾನು ಮಾನ್ಯ ಅಧ್ಯಕ್ಷರ ಪರ್ಮಿಷನ್ ಕೇಳಿದ್ದೇನೆ...

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳ ಬಗ್ಗೆ ಅಪಾದನೆ ಮಾಡಿದ್ದಾರೆ, ಆ ಬಗ್ಗೆ ನಿಲುವಳಿ ಸೂಚನೆ ಪತ್ರಿಕೆಗಳಲ್ಲಿ ಬಂದಿದೆ ಎನ್ನುವುದರ ಬಗ್ಗೆ ಇವರು ಚರ್ಚೆ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಬಂದಿದೆ, ಮೇಲ್ಮನೆಯಲ್ಲಿ ಅದರ ಬಗ್ಗೆ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಹಾಜರು ಇಲ್ಲ.....

ಶ್ರೀ ಯು. ಭೂಪತಿ.—ಯಾವ ವಿಷಯವನ್ನು ಇವರು ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಪರ್ಮಿಷನ್ ಕೊಟ್ಟಿಲ್ಲ, ಯಾವ ರೀತಿ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಅಧ್ಯಕ್ಷರು.—ನೀವು ಹಾದಿ ಬಿಟ್ಟು ಹೋಗಿದ್ದೀರಿ, ಅದಕ್ಕೆ ಅವರೂ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪಾಯಿಂಟ್ ಆಫ್ ಆರ್ಡರ್ ಏನು ಇದೆ ? ಇವರು ಭಾಷಣ ಮಾಡುತ್ತಿದ್ದಾರೆ.....

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಮುಖ್ಯಮಂತ್ರಿಗಳು ಯಾವ ಅರ್ಥದಲ್ಲಿ ಹೇಳಿದ್ದಾರೆ ಎಂಬುದನ್ನು ನೋಡಿದ ಮೇಲೆ ಒಂದು ನಿರ್ಣಯಕ್ಕೆ ಬರಬೇಕೆಂದು ವಿನಂತಿ..

ಶ್ರೀ ಯು. ಭೂಪತಿ.—ಇವರು ಯಾವ ವಿಷಯದ ಮೇಲೆ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಈಗ ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ. nothing will be recorded. ಈಗ ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ನಾನು ಏನು ಒಂದು ತೀರ್ಮಾನ ಕೊಟ್ಟಿದ್ದೇನೆ ಅಂದರೆ ಸಿ ಅಡ್‌ಜರ್ನ್‌ಮೆಂಟ್ ಮೋಷನ್ ಇದೆ. ನಾಳೆ ನಿಮ್ಮದು ಚರ್ಚೆ ಮಾಡೋಣ. ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎಂಬುದನ್ನು ಚರ್ಚೆ ಮಾಡಿ ಬಿಸಿನೆಸ್ ನಡೆಸೋಣ, ಇವೊತ್ತು ಎರಡು ಗಂಟೆಗೆ ಚರ್ಚೆ ಮುಗಿದು ಎರಡು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ಹೀಗೆ ತಡೆಯುತ್ತಾ ಹೋದರೆ ನಾನು ಮುಖ್ಯಮಂತ್ರಿಗಳನ್ನು ಉತ್ತರ ಹೇಳುವಂತೆ ಕರೆಯುವುದು ಅನಿವಾರ್ಯವಾಗುತ್ತದೆ. ಎರಡು ಗಂಟೆಯವರೆಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಇವೊತ್ತು ಕಾಲ್ ಅಟೆನ್‌ಷನ್ ಇಟ್ಟಿಲ್ಲ, ನಿಯಮ ೩೩ಳಿ ಇಟ್ಟಿಲ್ಲ. ನೀವು ಬಜೆಟ್ ಮೇಲೆ ಏನು ಬೇಕಾದರೂ ಹೇಳಿ. ಈ ಕಡೆ ಸದಸ್ಯರು ಆ ಕಡೆಯ ಸದಸ್ಯರು ಯಾರಿಗೂ ಅವಕಾಶ ಕೊಡುವುದಿಲ್ಲ. ಖರ್ಗೆಯವರು ಹಾಗೂ ಶ್ರೀನಿವಾಸ್‌ರವರು ಯಾರಾದರೂ ಬಜೆಟ್ ಮೇಲೆ ಮಾತನಾಡಿ. ಬೇರೆ ಯಾರಿಗೂ ಈಗ ಅವಕಾಶ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವೊತ್ತು ನಮ್ಮ ಪಕ್ಷ...

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ನನ್ನದು ಕ್ರಿಯಾಲೋಪ ವಿದೆ.

ಅಧ್ಯಕ್ಷರು.—ಖರ್ಗೆಯವರೇ, ಬಜೆಟ್ ಮೇಲೆ ಚರ್ಚೆ ಮಾಡಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಮಾನ್ಯ ಮುಖ್ಯಮಂತ್ರಿಯವರು ಯಾವ ಸಂದರ್ಭದಲ್ಲಿ ಈ ರೀತಿ ಹೇಳಿದರು ಎಂದು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು,—ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರನ್ನು ತಾವು ಕರೆಯಿಸಬೇಕು. ಇದರ ಬಗ್ಗೆ ಅವರು ಎಕ್ಸ್‌ಪ್ಲನೇಷನ್ ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ನೀವು ಬಡ್ಜೆಟ್ ಮೇಲೆ ಏನಾದರೂ ಮಾತನಾಡಿ. ಅವರು ಉತ್ತರ ಹೇಳುತ್ತಾರೆ. ಅವರು ಉತ್ತರ ಹೇಳದೆ ಹೋದರೆ ಮುಖ್ಯ ಮಂತ್ರಿಗಳು ಬಂದು ಉತ್ತರ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ನಿಮಗೆ ನಾನು ಸಿನ್ಸಿಯರ್ ರಿಕ್ವೆಸ್ಟ್ ಮಾಡುತ್ತಾ ಇದ್ದೇನೆ. ನೀವು ಬಜೆಟ್ ಮೇಲೆ ಮಾತನಾಡಿರಿ. ನೀವು ಬಡ್ಜೆಟ್ ವೇಲೆ ಮಾತನಾಡುವಾಗ ಆದರಲ್ಲಿ ಈ ವಿಷಯವನ್ನು ತೆಗೆದುಕೊಳ್ಳಿ. ಅವರಿಗೆ ಅವಕಾಶ ಸಿಕ್ಕಿದಾಗ ಅವರೂ ಹೇಳುತ್ತಾರೆ. ಬಡ್ಜೆಟ್ ವೇಲೆ ಮಾತನಾಡುವಾಗ ಇದೇ ವಿಷಯ ತೆಗೆದುಕೊಳ್ಳಿ.

ಶ್ರೀ ಬಿ. ಲಕ್ಕಪ್ಪ.—ಅವರು ಒಂದು ಪಕ್ಷ ಮತ್ತು ಪ್ರಧಾನಿಯವರಿಗೆ ಸಂಬಂಧಪಟ್ಟ ಹಾಗೆ ಮಾತನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನೀವು ಬಡ್ಜೆಟ್ ಮೇಲೆ ಭಾಷಣ ಪ್ರಾರಂಭ ಮಾಡಿ. ಅದರಲ್ಲಿ ಬೇಕಾದಷ್ಟು ವಿಷಯ ಹೇಳಿ.

ಶ್ರೀ ಧರ್ಮಸಿಂಗ್.—ಮಾನ್ಯ ಮುಖ್ಯಮಂತ್ರಿಗಳು ಬೇಜವಾಬ್ದಾರಿಯಿಂದ ಪ್ರಧಾನ ಮಂತ್ರಿಗಳ ಬಗ್ಗೆ ಹೇಳಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ...

(ಗೊಂದಲ)

ಅಧ್ಯಕ್ಷರು.—ನೀವು ಇಬ್ಬರೂ ವಿಷಯವನ್ನು ಹೇಳಿ.

ಶ್ರೀ ಪಟಮಕ್ಕಿ ರತ್ನಾಕರ.—ಮಾನ್ಯ ಅಧ್ಯಕ್ಷರೆ...

ಶ್ರೀ ಕೆ. ಹೆಚ್. ಶ್ರೀನಿವಾಸ್. ತಮ್ಮ ಜೊತೆಯಲ್ಲಿ ಅಸಹಕಾರ ಮಾಡತಕ್ಕಂಥ ವಿಚಾರವಲ್ಲ. ನಮ್ಮ ಸ್ನೇಹಿತರು ಅಡ್ಜರ್ನ್‌ಮೆಂಟ್ ಮೋಷನ್ ಏನು ಕಳಿಸಿದ್ದಾರೆ ಅದು ಬಹಳ ಮಹತ್ವವಾಗಿರ ತಕ್ಕಂಥಾದ್ದು. ಟೆಕ್ನಿಕಲ್ಲಾಗಿ ನೋಡಿದರೆ ನಾವು ಎತ್ತಿರತಕ್ಕ ವಿಷಯ ಅದು ನಿಲುವಳಿ ಸೂಚನೆ ಆಗುತ್ತದೋ ಇಲ್ಲವೋ ಆ ವಾದ ಇಲ್ಲ. ಆದಕ್ಕೆ ಮಹತ್ವ ಇರುವುದು ಏಕೆಂದರೆ ಈ ರಾಜ್ಯದ ಮುಖ್ಯ ಮಂತ್ರಿ ಈರೀತಿ ಹೇಳಿಕೆಯನ್ನು ಕೊಟ್ಟಾಗ...

(ಗೊಂದಲ)

ಅಧ್ಯಕ್ಷರು. ನೀವಿಬ್ಬರೂ ಅದನ್ನೇ ಹೇಳಿ. ನಾರಾಯಣರಾವ್‌ರವರು ಅವರದನ್ನು ಹೇಳಲಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಏನಾಗಿದೆ...

ಅಧ್ಯಕ್ಷರು. ಏನಾಗಿದೆ ಎನ್ನುವುದೂ ಬೇಡ, ಏನಾಗಿಲ್ಲ ಎನ್ನುವುದೂಬೇಡ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಮುಖ್ಯ ಮಂತ್ರಿಗಳು ಈರೀತಿಯಾಗಿ ಅಪಾದನೆ ಮಾಡಿದ್ದಾರೆ. ಲೋಕಸಭೆಯಲ್ಲಿ ಯಾರೋ ಒಬ್ಬ ವ್ಯಕ್ತಿಯ ಮೇಲೆ ಹೇಳಿದ್ದಕ್ಕೆ ವಿರೋಧಪಕ್ಷದವರು ಯಾವರೀತಿ ಮಾತನಾಡಿದರು ಎನ್ನುವುದು ಗೊತ್ತಿದೆ...

(ಗೊಂದಲ)

Mr Speaker.—Nothing will go on record. ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

MR. SPEAKER.—Nothing will go on record.

SRI VEDANTHA HEMMIGE.—I want ruling on my point of order...

ಅಧ್ಯಕ್ಷರು. ಪಾಯಿಂಟ್ ಆಫ್ ಆರ್ಡರ್ ಹೇಳುವುದಕ್ಕೆ ನಿಮಗೆ ಅಧಿಕಾರ ಇದೆ. ಬೇರೆ ವಿಷಯ ತೆಗೆದುಕೊಳ್ಳಬೇಡಿ ಎಂದು ಹೇಳುವುದಕ್ಕೂ ಅಧಿಕಾರ ಇದೆ. ನಾನು ಈಗಾಗಲೇ ತೀರ್ಮಾನ ಕೊಟ್ಟಿದ್ದೇನೆ. ಈಗ ೫ ಅಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ನಿಮ್ಮ ಜೊತೆಯಲ್ಲಿ ಚರ್ಚೆಮಾಡಿ ನಾಳೆ ಅಥವಾ ನಾಡಿದ್ದು ಅದನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ. ಅವರು ಈಗ ಬೇರೆ ವಿಷಯಗಳ ಮೇಲೆ ಮಾತನಾಡುವುದು ಸರಿಯಲ್ಲ. ಈಗ ಬಡ್ಜೆಟ್ ಮೇಲೆ ಮಾತನಾಡಿ, ಬೇರೆ ವಿಷಯ ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಮಗೆ ಏನು ಭಯ ಇದೆ ಅಂದರೆ ಓಟ್ ಆನ್ ಅಕೌಂಟ್ ತೆಗೆದುಕೊಂಡ ಕೂಡಲೇ ಅವರು ಓಡಿ ಹೋಗುತ್ತಾರೋ ಎನ್ನುವ ಭಯ ನಮಗೆ ಇದೆ ನಾವು ಓಡಿ ಹೋಗುವುದಿಲ್ಲ. ೩೧ನೇ ತಾರೀಖಿನವರೆಗೆ ಅಸೆಂಬ್ಲಿ ನಡೆಸುತ್ತೇವೆ ಎಂದು ಸರ್ಕಾರದ ಪರವಾಗಿ ಯಾರಾದರೂ ಹೇಳುವವರಿದ್ದೀರಾ.

MR. SPEAKER.—Nothing will go on record.

ಶ್ರೀ ಕೆ. ಹೆಚ್. ಶ್ರೀನಿವಾಸ.—ದಯವಿಟ್ಟು ಸರ್ಕಾರದವರು ಇದನ್ನು ಸ್ಪಷ್ಟ ಪಡಿಸಲಿ ? ೩೧ನೇ ತಾರೀಖಿನವರೆಗೂ ಅಸೆಂಬ್ಲಿ ನಡೆಸುತ್ತೇವೆ ಎಂದು ಯಾರಾದರೂ ಹೇಳುತ್ತೀರಾ ?

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಹಿಂದೇ ತಾರೀಖಿನವರೆಗೂ ಅಸೆಂಬ್ಲಿ ನಡೆಸಬೇಕು ಎಂದು ತೀರ್ಮಾನವಾಗಿದೆ. ಇನ್ನೂ ಳಿದಿವಸ ಇದೆ. ೫ ಅಡ್ಜರ್ನ್‌ಮೆಂಟ್ ಮೋಷನ್‌ಗಳು ಇವೆ. ಅವುಗಳನ್ನು ನಿಯಮ ೬೮ರ ಪ್ರಕಾರ ಚರ್ಚೆಮಾಡಬೇಕೇ ಅಥವಾ ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶ ಕೊಡಬೇಕೇ ಎನ್ನುವುದರ ಬಗ್ಗೆ ನೀವು ೫ ಮಂದಿಯನ್ನು ಕರೆದು ಮಾತನಾಡುತ್ತೇನೆ. ಆದರೆ ಹಿಂದಿನವರೆಗೂ ಅಸೆಂಬ್ಲಿ ನಡೆಯಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಎಂ. ಎಸ್. ಕೃಷ್ಣಾರವರಿದ್ದಾರೆ, ವೆಂಕಟರಾಮಯ್ಯನವರಿದ್ದಾರೆ. ಯಡಿಯೂರಪ್ಪನವರೂ ಇದ್ದಾರೆ, ಸತ್ಯನಾರಾಯಣರಾವ್‌ರವರೂ ಇದ್ದಾರೆ. ಮತ್ತು ಪಾರ್ಟಿಯವರೂ ಇದ್ದಾರೆ. ಇಷ್ಟು ಜನ ಇದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಹಿಂದಿನವರೆಗೂ ಅಸೆಂಬ್ಲಿ ನಡೆಯಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ, ನೀವು ಯಾವುದೇ ಅನುಮಾನವನ್ನು ಇಟ್ಟುಕೊಳ್ಳಬೇಡಿ. ಯಾವುದೇ ಸಬ್ಜೆಕ್ಟ್ ಇದ್ದರೂ ಅವಕಾಶ ಮಾಡಿಕೊಡೋಣ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಜೆಚ್. ಶ್ರೀನಿವಾಸ್.—ಅಧ್ಯಕ್ಷರೆ, ನಿಮ್ಮ ಬಗ್ಗೆ ನಮಗೆ ಭರವಸೆ ಇದೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಈಗ ಅಪ್ರೋಪ್ರಿಯೇಷನ್ ಬಿಲ್ ಆದಮೇಲೆ ಸಭೆಯನ್ನು ಮುಂದೆ ಹಾಕಿ ಎಂದು ಹೇಳಿ ಹೋದರೆ ನಾವು ಯಾರನ್ನು ಕೇಳುವುದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಬಿಸಿನೆಸ್ ಅಡ್ವೈಸರಿ ಕಮಿಟಿ ಎಷ್ಟು ದಿವಸ ಸಭೆ ನಡೆಸಬೇಕೆಂದು ತೀರ್ಮಾನ ಮಾಡಿರುತ್ತದೆ ಅಷ್ಟು ದಿವಸ ಸಭೆ ಅನೇಕ ಸಾರಿ ನಡೆಸಿಲ್ಲದೇ ಅಡ್ಜರ್ನ್ ಮಾಡಿರುವ ಉದಾಹರಣೆಗಳೂ ಇವೆ.

(ಗೊಂದಲ)

ಅಧ್ಯಕ್ಷರು.—ಆ ತರಹ ಮಾಡುವುದಿಲ್ಲ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ತಾವು ೧೦೦ ದಿವಸ ಸಭೆ ನಡೆಸುತ್ತೇವೆಂದು ಹೇಳಿದ್ದಿರಿ.

(ಗೊಂದಲ)

ಅಧ್ಯಕ್ಷರು.—ಯಾವುದಕ್ಕೂ ನಂಬಿಕೆಡಬೇಕು ದಯವಿಟ್ಟು ಕುಳಿತುಕೊಳ್ಳಿ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಹಿಂದೇ ತಾರೀಖಿನವರೆಗೂ ಈ ಸಭೆ ನಡೆಯುತ್ತದೆ. ಮುಂದೆ ಮೇ ತಿಂಗಳಲ್ಲಿ ೧೨ ತಿಂಗಳ ರಿಪೋರ್ಟ್ ತರಿಸಿಕೊಂಡು ಎಲ್ಲ ಸದಸ್ಯರಿಗೂ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡೋಣ. ೫ ವರ್ಷಗಳಲ್ಲಿ ಯಾವ ವರ್ಷ ಅತೀ ಹೆಚ್ಚು ದಿವಸ ಸಭೆ ನಡೆದಿದೆ ಅದಕ್ಕಿಂತಲೂ ಹೆಚ್ಚು ದಿವಸ ನಡೆಸೋಣ. ಲೆಜಿಸ್ಲೇಟರ್ಸ್‌ಗೆ ಮಾಡಬೇಕು. ಇದು ಕಡೆಯ ವರ್ಷವಾಗಿರುವುದರಿಂದ ಕಡೆಯ ವರ್ಷ ಎಲ್ಲರೂ ನಗು ನಗುತ್ತಾ ಹೋಗೋಣ ಎಂದು ಹೇಳಿದ್ದೇವೆ. ಇದಕ್ಕೆ ಚೀಫ್ ಮಿನಿಸ್ಟರ್ ಒಪ್ಪುತ್ತಾರೆ, ನೀವೂ ಒಪ್ಪುತ್ತೀರಿ. ಈಗ ಚರ್ಚೆಯನ್ನು ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಈಗ ಎಕ್ಸ್‌ಪ್ಲನೇಷನ್ ಕೊಡಿಸುತ್ತೇವೆ ಅಂದರೆ..

(ಗೊಂದಲ)

ಅಧ್ಯಕ್ಷರು.—ಅವರು ಉತ್ತರ ಹೇಳುತ್ತಾರೆ, ತಾವು ಚರ್ಚೆ ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಇದು ಯಾರ ಮೇಲೋ ಗೂಬೆ ಕೂರಿಸಿ ಹೊರಟು ಹೋಗುವುದು ಆಗುತ್ತದೆ. ಅವರು ರಾಜಕೀಯ ಭಾಷಣವನ್ನು ಹೊರಗಡೆ ಮಾಡಲಿ, ಈಗ ಅವರನ್ನು ಕರೆಯಿಸಿ ಹೇಳಿಸಿ.

(ಗೊಂದಲ)

ಅಧ್ಯಕ್ಷರು.—ಇವತ್ತು ೨ ಗಂಟೆಗೆ ರಿಪ್ಲೈ ಇದೆ. ತಾವು ಮಾತನಾಡಲಿಕ್ಕೆ ಪ್ರಾರಂಭ ಮಾಡಿ, ನಾನು ಹೇಳಿಕಳುಹಿಸುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ನಾನು ಮಾತನಾಡಲಿಕ್ಕೆ ಬಂದಿದ್ದೇನೆ. ಸ್ಪೆಷಲ್ ಕಾಂಪೋನೆಂಟ್ಸ್ ಮೇಲೆ, ಬಡ್ಜೆಟ್ ಮೇಲೆ ಮಾತನಾಡಲಿಕ್ಕೆ ತಾವು ಏನೇನು ಮಾಹಿತಿಗಳನ್ನು ಕೊಟ್ಟಿದ್ದೀರಿ ಅದನ್ನೆಲ್ಲಾ ನೋಡಿಕೊಂಡು ನಾನು ತಯಾರು ಮಾಡಿಕೊಂಡು ಬಂದಿದ್ದೇನೆ. ಇವೊತ್ತು ಅನೇಕ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮುಗಳು ಇರುತ್ತವೆ. ೫೦ ಪರ್‌ಸೆಂಟ್, ೧೦೦ ಪರ್‌ಸೆಂಟ್ ಗ್ರಾಂಟ್ಸ್ ಸಿಕ್ಕತಕ್ಕದ್ದು ಇರುತ್ತದೆ. ಅನೇಕ ಪ್ಲಾನಿಂಗ್ ಸ್ಕೀಮುಗಳೂ ಇರುತ್ತದೆ. ರಾಜ್ಯದ ಒಬ್ಬ ಜವಾಬ್ದಾರಿ ಮುಖ್ಯಮಂತ್ರಿಯವರು ಎಲ್ಲದಕ್ಕೂ ಕಾಂಗ್ರೆಸ್‌ನವರೇ ಇದಕ್ಕೆಲ್ಲಾ ರೆಸ್‌ಪಾನ್ಸಿಬಲ್ ಎಂದು ಈ ರೀತಿ ಮಾತನಾಡಿದರೆ ಏನಾಗುತ್ತದೆ. ಇದರ ಪರಿಣಾಮ ಸ್ಟೇಟ್ ಅಡ್ಮಿನಿಸ್ಟ್ರೇಷನ್ ಮೇಲೆ ಬೀಳುತ್ತದೆ...

(ಗೊಂದಲ)

ಅಧ್ಯಕ್ಷರು.—ಈಗ ತಾವು ಮಾತನಾಡಿ, ತಾವು ಕೇಳುವಂಥಾದ್ದಕ್ಕೆ ಅವರು ಉತ್ತರ ಕೊಡುತ್ತಾರೆ. ಎರಡು ಗಂಟೆಗೆ ರಿಪ್ಲೈ ಇದೆ, ಆಗ ಹೇಳುತ್ತಾರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಅನೇಕ ಸಾರಿ ತಮ್ಮ ಮಾತು ಕೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಉತ್ತರ ಕೊಡಲಿಕ್ಕೆ ಹೇಳುತ್ತೇನೆ ತಾವು ಮಾತನಾಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಬಡ್ಜೆಟ್ ಭಾಷಣಕ್ಕೂ ಇದಕ್ಕೂ ಮಿಕ್ಸ್‌ಅಪ್ ಮಾಡಲಿಕ್ಕೆ ಆಗುವುದಿಲ್ಲ. ಅದಕ್ಕೆ ಬೇರೆ ಉತ್ತರ ಹೇಳಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಅವಕಾಶ ಕೊಡಬೇಕು. ನಮಗೆ ಭಯ ಏನೆಂದರೆ, ಬಡ್ಜೆಟ್ ಮುಗಿಸಿಕೊಂಡ ಕೂಡಲೇ ಬಿಸಿನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನ ಯಾವುದೂ ಕೇಳದೆ, ಮೊನ್ನೆ ಗಾರ್ನರ್ ಅಡ್ರೆಸ್‌ಗೆ ಮಾಡಿದ ತರಹ ಮಾಡುತ್ತಾರೆಂಬ ಭಯ ಇದೆ.

(ಗೊಂದಲ)

ಅಧ್ಯಕ್ಷರು.—ಅವೊತ್ತು ಗಾರ್ನರ್ ಅಡ್ರೆಸ್ ರಿಪ್ಲೈಗೆ ಲಾಸ್ಟ್ ಡೇಟ್ ಇತ್ತು. ಈಗ ೩೧ನೇ ತಾರೀಖಿನವರೆಗೆ ಇದೆ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೆ, ಈ ವಿಚಾರದ ಬಗ್ಗೆ ತಾವು ಹೇಳುತ್ತಿದ್ದೀರೇ ಹೊರತು ಮಾನ್ಯ ಮಂತ್ರಿಗಳು ಯಾರೂ ಹೇಳುತ್ತಿಲ್ಲ. ಎಲ್ಲರೂ ವೌನವಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಅವರು ನಿಮ್ಮ ಮೂರಕ್ಕೆ ಆರರಷ್ಟು ಹೇಳಬಹುದಾಗಿತ್ತು. ಅವರು ಹೇಳುತ್ತಿಲ್ಲ. ಅದು ಅವರ ಸೌಜನ್ಯ. ಅವರು ದೊಡ್ಡ ಮನಸ್ಸು ಮಾಡಿ ಕುಳಿತಿದ್ದಾರೆ. ಅವರು ಗೌರವದಿಂದ ಸುಮ್ಮನೆ ಕುಳಿತಿದ್ದಾರೆ.

(ಗೊಂದಲ)

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ಅವರು ದೊಡ್ಡ ಮನಸ್ಸನ್ನು ಮಾಡಿ ಸುಮ್ಮನೆ ಕುಳಿತಿಲ್ಲ, ಅವರ ಮನಸ್ಸಿನಲ್ಲಿ ಏನೂ ಇಲ್ಲ. ಆದ್ದರಿಂದ ಅವರು ಸುಮ್ಮನೆ ಕುಳಿತಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್. ತಮ್ಮ ಮನಸ್ಸಿನಲ್ಲಿ ಏನಿದೆ ಅದನ್ನಾದರೂ ಹೇಳಿ. ಇನ್ನೂ ತೀರ್ಮಾನವಾಗಿಲ್ಲದಿದ್ದರೆ, ನಾವು ಇನ್ನೂ ಏನೂ ತೀರ್ಮಾನ ಮಾಡಿಲ್ಲ ಎಂದಾದರೂ ಹೇಳಿ.

ಶ್ರೀ ಬಿ. ರಾಚಯ್ಯ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಏನು ತೀರ್ಮಾನ ಮಾಡಿದ್ದೇವೆ ಅದರ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆ. ತಾವು ಇಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿದ ಮೇಲೆ ಸುಮ್ಮನೆ ಕುಳಿತ್ತಿದ್ದೇವೆ. ಆದರೆ ಅವರ ಕಡೆಯವರು ಒಬ್ಬರಮೇಲೊಬ್ಬರು ನಿಂತುಕೊಂಡು ಮಾತನಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ಯಾರೂ ಕೂಡ ಅವರಂತೆ ನಿಂತು ಮಾತನಾಡುತ್ತಿಲ್ಲ. ಆಪತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆ ಅದರ ಪ್ರಕಾರ ಈ ಸಭೆ ನಡೆಯುತ್ತದೆಂದು ನಾನು ಅವರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಅಧ್ಯಕ್ಷರೆ, ಅವರು ಸದನದ ಕಾಲಹರಣ ಮಾಡುತ್ತಿರುವುದಕ್ಕೆ ಬಹಳ ಬೇಸರವಾಗುತ್ತಿದೆ. ಬಜೆಟ್ ಮೇಲೆ ಅವರು ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿ ನಮ್ಮ ಈ ವಿಚಾರದ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಿಸುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಏಕೆಂದರೆ, ಇಲ್ಲಿ ಅದನ್ನೂ ಇದನ್ನೂ ಮಿಕ್ಸ್ ಮಾಡುವುದು ಬೇಡ...

ಅಧ್ಯಕ್ಷರು.—ಬಜೆಟ್ ಭಾಷಣ ಏನು ಎನ್ನುವುದು ನನಗೂ ಗೊತ್ತಿದೆ. ಇವರಲ್ಲಿ ಅದನ್ನು ಮಿಕ್ಸ್ ಮಾಡುವುದು ಬೇಡವೆಂದು ಹೇಳುತ್ತಿದ್ದೀರಿ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀವು ಏನು ಹೇಳುತ್ತೀರಿ ಅದಕ್ಕೆ ಸಮಂಜಸವಾದ ಉತ್ತರವನ್ನು ಅವರು ಕೊಡುತ್ತಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬೊಮ್ಮಾಯಿ ಯವರು ಹೊರಗಡೆ ಏನು ಭಾಷಣವನ್ನು ಮಾಡಿದ್ದಾರೆ ಅದರ ಬಗ್ಗೆ ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತಂದಿದ್ದಾರೆ. ಅದರೆ ಇದು ಅಡ್ವರ್ಟೈಸ್‌ಮೆಂಟ್ ಮೋಷನ್ ಆಗುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಈ ವಿಚಾರವನ್ನು ಅವರು ನಿಯಮ ೩೧೦ರ ಕೆಳಗಾಗಲಿ, ಗಮನ ಸೆಳೆಯುವ ಸೂಚನೆಯ ರೂಪದಲ್ಲಾಗಲಿ ಅಥವಾ ಇನ್ನೂ ಬೇರೆ ಯಾವುದಾದರೂ ಒಂದು ರೂಪದಲ್ಲಿ ಪ್ರಸ್ತಾಪ ಮಾಡಿ ಅದಕ್ಕೆ ಉತ್ತರವನ್ನು ಪಡೆಯುವುದಕ್ಕೆ ಅವರು ಪ್ರಯತ್ನ ಮಾಡಬೇಕು. ಅವರು ಅಲ್ಲಿ ಯಾವ ಆವೇಶದಿಂದ ಮಾತನಾಡಿದ್ದಾರೋ, ಯಾವ ಸಂದರ್ಭದಲ್ಲಿ ಮಾತನಾಡಿದ್ದಾರೋ ಗೊತ್ತಿಲ್ಲ. ಆದರೆ ಆದೇರೀತಿ ಇವರೂ ಕೂಡ ಬಹಳ ಆವೇಶದಿಂದ ಇಲ್ಲಿ ಮಾತನಾಡುವುದು ಸರಿಯಲ್ಲ. ಅವರು ಪ್ರಸ್ತಾಪ ಮಾಡಿರುವುದಕ್ಕೆ ಒಂದು ರೀತಿಯ ಸಮಂಜಸವಾದ ಉತ್ತರ ಬೇಕಾಗಿದೆ. ಆದ್ದರಿಂದ ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ನಾನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ.....

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.....

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಆಲ್ಲಿ ೧೩ ಸಾವಿರ ಜನ ಮಿಲ್ ಕಾರ್ಮಿಕರು ಪಿಕೆಟಿಂಗ್ ಮಾಡುತ್ತಿದ್ದಾರೆ. ಅವರು ಬಿನ್ನಿಮಿಲ್‌ಗೆ ಸೇರಿದ ಕಾರ್ಮಿಕರು. ಮಾನ್ಯ ಸಚಿವರಾದ ಗೋವಿಂದೇ ಗೌಡರು ಈಗ ಸದನದಲ್ಲಿದ್ದಾರೆ. ತಾವು ಹೇಳಿದರೆ ಅವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ. ಸುಮಾರು ೧೨-೧೩ ಟೆಕ್ಸ್‌ಟೈಲ್ ಮಿಲ್ಲುಗಳ ಕಾರ್ಮಿಕರು ಇವತ್ತು ಆಲ್ಲಿ ಪಿಕೆಟಿಂಗ್ ನಡೆಸುತ್ತಿರುವುದರಿಂದ ಇದನ್ನು ನಾನು ಸೆಟಿಲ್ ಮಾಡುತ್ತೇನೆಂದು ಮಾನ್ಯ ಗೋವಿಂದೇಗೌಡರು ಒಂದು ಹೇಳಿಕೆಯನ್ನು ಕೊಡುವಂತೆ ತಾವು ಹೇಳಿ.....

MR. SPEAKER.—Nothing will be recorded.

XX XX XX

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಅಧ್ಯಕ್ಷರೆ .....

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. Nothing will be recorded.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಆಲ್ಲಿ ೧೩ ಸಾವಿರ ಜನ ಕಾರ್ಮಿಕರು ಪಿಕೆಟಿಂಗ್ ನಡೆಸುತ್ತಿದ್ದಾರೆ.....

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ನೀವು ಸೂಚನೆ ಕೊಟ್ಟಿರುವುದಕ್ಕೆ ಎಷ್ಟು ಮಹತ್ವ ಇದೆಯೋ, ಅಷ್ಟೇ ಮಹತ್ವ ಮಾನ್ಯ ಯಡಿಯೂರಪ್ಪನವರು ಕೊಟ್ಟಿರುವುದಕ್ಕೂ ಇದೆ. ಮಾನ್ಯ ಭೂಪತಿಯವರು ಕೊಟ್ಟಿರುವುದಕ್ಕೂ ಇದೆ, ಅದೇ ರೀತಿ ಮಾನ್ಯ ಕೃಷ್ಣನ್‌ರವರು ಕೊಟ್ಟಿರುವುದಕ್ಕೂ ಕೂಡ ಮಹತ್ವ ಇದೆ. ದಯವಿಟ್ಟು ಕೂಡಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾನು ಏತಕ್ಕೆ.....

MR. SPEAKER.—Nothing will be recorded.

ಶ್ರೀ ಬಿ. ರಾಚಯ್ಯ.—ತಾವು ಆಪ್ಪಣೆ ಕೊಟ್ಟಿದ್ದೀರಿ, ಆದರ ಪ್ರಕಾರ ಇವತ್ತು ಬೇರೆ ವಿಷಯಕ್ಕೆ ಹೋಗೋಣ.

ಶ್ರೀ ಧರ್ಮಸಿಂಗ್.—ಮಂತ್ರಿಗಳು ಸದನದಲ್ಲಿ ಇದ್ದಾರೆ. ಅವರು ಉತ್ತರವನ್ನು ಕೊಡಲಿ.

ಅಧ್ಯಕ್ಷರು.—ಈಗ ಉತ್ತರ ಕೊಡುವ ಟೈಂ ಅಲ್ಲ. ನಿಲುವಳಿ ಸೂಚನೆ ಬಗ್ಗೆ ಈಗಾಗಲೇ ತೀರ್ಮಾನ ಕೊಟ್ಟಿದ್ದೇನೆ. ನಾನು ಈಗಾಗಲೇ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಬಜೆಟ್ ಮೇಲೆ ಭಾಷಣ ಮಾಡಲು ಕರೆದಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಈಗ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಕರೆದಿದ್ದೇನೆ. ಅವರು ಮಾತನಾಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ಶ್ರೀ ಕೃಷ್ಣನ್‌ರವರೆ, ನೀವು ಸೀನಿಯರ್ ಮೋಸ್ಟ್ ಮೆಂಬರ್ ಈ ಸಭೆ ನಡೆಯಲು ಬಿಡುವುದಿಲ್ಲ ಏಕೆ?

ಶ್ರೀ ಎಂ. ಎಸ್. ಕೃಷ್ಣನ್.—ಈ ಸಭೆಯು ನಡೆಯಲು ನಾನು ಅಡ್ಡಿ ಬರುವುದಿಲ್ಲ. ಕೆಲವು ಸಂದರ್ಭದಲ್ಲಿ ಇಂತಹ ಪರಿಸ್ಥಿತಿ ಬಂದಾಗ .....

ಅಧ್ಯಕ್ಷರು.—ನೀವು ಎಷ್ಟು ಉದ್ದ ಭಾಷಣ ಮಾಡಿದ್ದೀರಿ, ಬೇರೆಯವರು ಮಾತ್ರ ಮಾತನಾಡಬಾರದು.....

ಶ್ರೀ ಎಂ. ಎಸ್. ಕೃಷ್ಣನ್.—ತಾವು ತಪ್ಪು ತಿಳಿದುಕೊಂಡಿದ್ದೀರಿ, ತಾವು ನಮಗೆ ಅಗೌರವ ಕೊಟ್ಟರೂ ಸಹ ನಾವು ನಿಮಗೆ ಗೌರವ ಕೊಡುತ್ತೇವೆ.

MR. SPEAKER.—I have got the highest regard for you. ನೀವು ಸೀನಿಯರ್ ಮೋಸ್ಟ್ ಮೆಂಬರ್, ಈ ಸಭೆ ನಡೆಯಲು ಅವಕಾಶ ಕೊಡಿ ಎಂದು ಹೇಳಿದ್ದೇನೆ. ನೀವು ಒಂದು ತಾಸು ಮಾತನಾಡಿದ್ದೀರಿ. ನಿಲುವಳಿ ಸೂಚನೆಯ ನೋಟೀಸನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ.

(Not recorded as ordered by the Chair)

ಶ್ರೀ ಎಂ. ಎಸ್. ಕೃಷ್ಣನ್.—ನಿಲುವಳಿ ಸೂಚನೆಯನ್ನು ನೀವು ಕನ್ಸಿಡರ್ ಮಾಡಬೇಕಾಗಿಲ್ಲ. ನಿಜಾಂಶ ಏನೆಂದರೆ, ಒಂದು ಸಮಸ್ಯೆ ಬಂದಿದೆ. ಕೆಲವು ಸಂದರ್ಭಗಳಲ್ಲಿ ಇಂತಹ ಸಮಸ್ಯೆಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ನಾವು ಕೇಳಿಕೊಳ್ಳುತ್ತೇವೆ, ನೀವು ಮಂತ್ರಿಗಳಿಗೆ ಹೇಳಬೇಕು. ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ಬಿನ್ನಿಮಿಲ್ ನೌಕರರು ಪಿಕೆಟಿಂಗ್ ಮಾಡಿದ್ದಾರೆ. ಸಮಸ್ಯೆಗಳು ಗಂಭೀರವಾಗಿದೆ. ಮಂತ್ರಿಗಳು ಹೇಳಿಕೆಯನ್ನು ಕೊಡಲು ತಯಾರಾಗಿದ್ದಾರೆ. ಸಾಯಂಕಾಲದೊಳಗೆ ಯಾವಾಗಲಾದರೂ ಹೇಳಿಕೆಯನ್ನು ಕೊಡಲಿ.

ಅಧ್ಯಕ್ಷರು.—೫ ನಿಲುವಳಿ ಸೂಚನೆಗಳು ಬಂದಿವೆ. ಅವುಗಳ ಬಗ್ಗೆ ನಿಮಗೆ ಯಾವರೀತಿಯಲ್ಲಿ ಅವಕಾಶ ಮಾಡಿಕೊಡಬೇಕು ಎನ್ನುವುದರ ಬಗ್ಗೆ ನಿರ್ಧರಿಸಲು ನಾಳೆ, ನಾಡಿದ್ದು ನಿಮ್ಮನ್ನು ಕರೆಸಿ ಮಾತನಾಡುತ್ತೇನೆ. ಅವರನ್ನೂ ಕರೆಸುತ್ತೇನೆ. ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಇದನ್ನು ನಾನು ರಿಜೆಕ್ಟ್ ಮಾಡಿದ್ದೇನೆಂದು ಹೇಳಿಲ್ಲ. ೫ ನಿಲುವಳಿ ಸೂಚನೆಗಳು ಇರುವುದರಿಂದ ಕಾಲಿಂಗ್ ಅಟೆನ್‌ಷನ್ ಅಥವಾ ನಿಯಮ ೬೮ರ ಪ್ರಕಾರ, ಚರ್ಚೆ ಅಥವಾ ಅರ್ಧ ಗಂಟೆ ಚರ್ಚೆ ಅಥವಾ ಪ್ರಿಲಿಮನರಿ ಸಬ್‌ಮಿಷನ್ ಮಾಡಲು ಯಾವ ರೀತಿ ಅವಕಾಶ ಕೊಡಬೇಕು ಎಂಬುದನ್ನು ನಿರ್ಧಾರ ಮಾಡುತ್ತೇನೆ. ನಿಮ್ಮ ಜೊತೆಯಲ್ಲಿ ಡಿಸ್‌ಕಸ್ ಮಾಡುತ್ತೇವೆ. ಅವರನ್ನೂ ಕರೆದು ಕೂಡ ಡಿಸ್‌ಕಸ್ ಮಾಡುತ್ತೇನೆ. ಈಗ ಬಜೆಟ್ ಮೇಲೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಭಾಷಣ ಮಾಡಲಿ. ಎರಡು ಗಂಟೆಗೆ ಮುಖ್ಯ ಮಂತ್ರಿಗಳ ಉತ್ತರ ಇದೆ. ಆದ್ದರಿಂದ ಅವರು ಈಗ ಭಾಷಣವನ್ನು ಪ್ರಾರಂಭ ಮಾಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಅವರು ಉತ್ತರ ಕೊಡಲು ಸಾಧ್ಯವಿಲ್ಲ. ಅವರು ಕೊಡುವುದಿಲ್ಲ. ನೀವು ವಾಕ್‌ಔಟ್ ಬೇಕಾದರೆ ಮಾಡಿ. ನಾನು ಬೇರೆಯವರಿಗೆ ಯಾರಿಗೂ ಅವಕಾಶ ಕೊಡುವುದಿಲ್ಲ.

(ಶ್ರೀ ಆರ್. ವೆಂಕಟರಾಮಯ್ಯನವರು ಸಭಾತ್ಯಾಗ ಮಾಡಿದರು)

ವಿತ್ತೀಯ ಕಾರ್ಯಕಲಾಪಗಳು

೧೯೮೪–೮೫ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಮಾನ್ಯ ಅಧ್ಯಕ್ಷರೆ, ನಾನು ೧೯೮೪–೮೫ನೇ ಸಾಲಿನ ಬಜೆಟ್ ಮೇಲೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಮುಖ್ಯವಾಗಿ ನಾವು ಹೊಸ ಮುಖ್ಯ ಮಂತ್ರಿಗಳು ಬಂದಮೇಲೆ ಅವರು ಏನಾದರೂ ಹೊಸ ಯೋಜನೆಗಳನ್ನು, ಹಾಗೂ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂಬ ಭಾವನೆಯನ್ನು ಇಟ್ಟು ಕೊಂಡಿದ್ದೆವು. ಆದರೆ ಈ ಬಜೆಟ್ ಭಾಷಣವನ್ನು ನೋಡಿದ ಮೇಲೆ, ನಾವು ಏನು ತಿಳಿದು ಕೊಂಡಿದ್ದೆವು ಆ ರೀತಿ ಇವರು ಮಾಡಿಲ್ಲ. ಇದು ಯಾವ ಪ್ರಕಾರವಾಗಿ ನಡೆದಿದೆ ಎಂದರೆ ೧೯೮೩ರಿಂದ ನಡೆದುಕೊಂಡು ಬಂದಂತಹ ಪದ್ಧತಿಯಲ್ಲಿಯೇ ಈ ಬಜೆಟ್ ಇದೆ. ೧೯೮೩ ರಿಂದ ಏನು ಒಂದು ಪದ್ಧತಿಯನ್ನು ಇವರು ಆನುಸರಿಸುತ್ತಿದ್ದಾರೆಂದರೆ, ಈ ಬಜೆಟ್‌ನಲ್ಲಿ ಕನಿಷ್ಟ ಪಕ್ಷ ೧೨–೧೩ ಪುಟಗಳನ್ನು ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರವನ್ನು ದೂಷಣೆ ಮಾಡುವ ಉದ್ದೇಶದಿಂದ ಪ್ರಿಂಟ್ ಮಾಡಂತ್ತಿದ್ದಾರೆ. ೧೯೮೩ರ ಹಿಂದೆ ಏನು ನಡೆದಿದೆ ಅಂದರೆ ಶ್ರೀ ರಾಮಕೃಷ್ಣ ಹೆಗಡೆಯವರು ಹಿಂದೆ ಹಣಕಾಸು ಸಚಿವರಾಗಿದ್ದಾಗ, ಯಾವ ರೀತಿಯಲ್ಲಿ ಕೇಂದ್ರ ಸರ್ಕಾರದ ಮೇಲೆ ಎಷ್ಟು ಪುಟ ಅವರ ಭಾಷಣದಲ್ಲಿ ರಿಜರ್ವ್ ಮಾಡುತ್ತಿದ್ದರು ಎಂಬುದನ್ನು ನಾನು ನೋಡಿದ್ದೇನೆ. ಹಿಂದೆ ಅವರು ಈ ರೀತಿಯಾಗಿ ೧೦–೧೨ ಪುಟಗಳನ್ನು ಕೇಂದ್ರ ಸರ್ಕಾರವನ್ನು ದೂಷಿಸಲು ಉಪಯೋಗ ಮಾಡಿಲ್ಲ. ಈಗ ೧೯೮೩ರ ನಂತರ ಏನು ಮಾಡುತ್ತಿದ್ದಾರೆಂದರೆ ಕೇಂದ್ರ ಸರ್ಕಾರದವರು ಅದು ಕೊಟ್ಟಿಲ್ಲ. ಸರ್ಕಾರಿಯ ಕಮಿಷನ್ ಪ್ರಕಾರ ನಮಗೆ ಸಿಕ್ಕಬೇಕಾಗಿರುವುದು ಸಿಕ್ಕಿಲ್ಲ. ನಮಗೆ ಸಾಧ್ಯವಾದಷ್ಟು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.